(ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಪ್ರತ್ಯೇಕ
ಆದೇಶದೊಂದಿಗೆ ಉದ್ಘೋಷಿಸಲಾಯಿತು)

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಭಾರತೀಯ ದಂಡ ಸಂಹಿತೆಯ ಕಲಂ-341, 506 ಮತ್ತು 332 ಸಹವಾಚಕ 34 ರಡಿಯಲ್ಲಿ ಆರೋಪಿಸಲಾದ ಆರೋಪಗಳಿಂದ ಆರೋಪಿಯನ್ನು ದೋಷಮುಕ್ತಗೊಳಿಸಿ ಸ್ವತಂತ್ರಗೊಳಿಸಿದೆ.

ಆರೋಪಿ ಪರ ಬರೆದು ಕೊಟ್ಟಿರುವ ಜಾಮೀನು ಮುಚ್ಚಳಿಕೆಯು 6 ತಿಂಗಳ ಕಾಲ ಮುಂದುವರಿಯುವುದು. ಸದರಿ ಅವಧಿಯಲ್ಲಿ ಮೇಲ್ಮನವಿ ಪ್ರಾಧಿಕಾರದಿಂದ ಯಾವುದೇ ಸೂಚನೆ ಬರದೆ ಇದ್ದಲ್ಲಿ ಸದರಿ ಜಾಮೀನು ಮುಚ್ಚಳಿಕೆಯು ಸ್ವಯಂ ಚಾಲಿತವಾಗಿ ರದ್ದಾಗತಕ್ಕದ್ದು.

ಈ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ಮತ್ತು ಸ್ವತ್ತು ಪಟ್ಟಿ ಸಂಖ್ಯೆ: 78/2014 ರಲ್ಲಿ ನಮೂದಿಸಿರುವ ಮುದ್ದೆ ಮಾಲು-1 ಮಚ್ಚು ಬೆಲೆ ಬಾಳುವ ವಸ್ತುವಾಗಿರುವುದರಿಂದ ಅದನ್ನು ನಿಗಧಿತ ಸಮಯದಲ್ಲಿ ನಾಶಪಡಿಸತಕ್ಕದ್ದು.

ಈ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ಮತ್ತು ಸ್ವತ್ತು ಪಟ್ಟಿ ಸಂಖ್ಯೆ: 78/2014 ರಲ್ಲಿ ನಮೂದಿಸಿರುವ ಮುದ್ದೆ ಮಾಲು-2 ಸಮವಸ್ತ್ರ ಬೆಲೆ ಬಾಳದ ವಸ್ತುವಾಗಿರುವುದರಿಂದ ಅದನ್ನು ನಿಗಧಿತ ಸಮಯದಲ್ಲಿ ನಾಶಪಡಿಸತಕ್ಕದ್ದು.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ನಂಜನಗೂಡು